# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2018-19ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿ ಅಲ್ಪಸಂಖ್ಯಾತ ಫಲಾನುಭವಿಗಳಿಗೆ **"ಬಿದಾಯಿ"** ಯೋಜನೆಯ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲುಡಿ 257 ಎಂಡಿಎಸ್ 2018, ಬೆಂಗಳೂರು ದಿ: 06.04.2018.

2. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 257 ಎಂಡಿಎಸ್ 2018 ಬೆಂಗಳೂರು ದಿ: 15.10.2018.

>>><<<

**ಪ್ರಸ್ತಾವನೆ:-**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳನ್ನು 2018-19ನೇ ಆರ್ಥಿಕ ಸಾಲಿನಲ್ಲಿ ಮುಂದುವರೆಸಿ ಉಲ್ಲೇಖ (1)ರಲ್ಲಿ ಆದೇಶ ಹೊರಡಿಸಲಾಗಿದೆ. ಅದರಲ್ಲಿ **"ಬಿದಾಯಿ"** ಕಾರ್ಯಕ್ರಮವು ಸಹ ಒಂದಾಗಿರುತ್ತದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳಿಗೆ 2018-19ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಮೂರನೇ ತ್ರೈಮಾಸಿಕ ಕಂತನ್ನು ಉಲ್ಲೇಖ (2)ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ಅದರಲ್ಲಿ "ಬಿದಾಯಿ" ಯೋಜನೆಗೆ ಮೂರನೇ ಕಂತಿನ ಅನುದಾನ ರೂ1375.00 (ರೂ. ಹದಿಮೂರು ಕೋಟಿ ಎಪತ್ತೈದು ಲಕ್ಷ ರೂ ಮಾತ್ರ) ಗಳನ್ನು ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಇವರ ವಶಕ್ಕೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದ ಪೈಕಿ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಬಿದಾಯಿ ಕಾರ್ಯಕ್ರಮಕ್ಕಾಗಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಪ್ರಕಾರ ಸಂಬಂಧಪಟ್ಟ ಜಿಲ್ಲೆಗಳಿಗೆ ಮೂರನೇ ಕಂತಿನ ಅನುದಾನ ಒಟ್ಟು ರೂ1375.00 (ರೂ. ಹದಿಮೂರು ಕೋಟಿ ಎಪತ್ತೈದು ಲಕ್ಷ ರೂ ಮಾತ್ರ) ಗಳನ್ನು ಸಂಬಂಧಪಟ್ಟ ಆಯಾ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,** ರವರಿಗೆ ಮರು ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ.

## ಆ ದೇ ಶ

**ಸಂಖ್ಯೆ: ಅಸಂನಿ/ಆ/ಬಿದಾಯಿ/ಸೀಆರ್-101/2018-19** **ದಿನಾಂಕ:16-10-2018**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅಲ್ಪಸಂಖ್ಯಾತ ಸಮುದಾಯದ ಫಲಾನುಭವಿಗಳಿಗೆ **"ಬಿದಾಯಿ"** ಕಾರ್ಯಕ್ರಮವನ್ನು ಜಾರಿಗೊಳಿಸಲು 2018-19ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಮೂರನೇ ಕಂತಿನ ಅನುದಾನದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಪ್ರಕಾರ ಸಂಬಂಧಪಟ್ಟ ಜಿಲ್ಲೆಗಳಿಗೆ ಮೂರನೇ ಕಂತಿನ ಅನುದಾನ ರೂ1375.00 (ರೂ. ಹದಿಮೂರು ಕೋಟಿ ಎಪತ್ತೈದು ಲಕ್ಷ ರೂ ಮಾತ್ರ) ಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಆಯಾ ಜಿಲ್ಲೆ ಮುಂದೆ ತೋರಿಸಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,** ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

Contd....02

ರವಾನಿಸಿದೆ.
ದಿನಾಂಕ 17/10/18

**ನಿಬಂಧನೆಗಳು:–**

1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 533 ಎಂಡಿಎಸ್ 2013 ದಿನಾಂಕ: 13.11.2013ರಂತೆ ನೀಡಲಾಗಿರುವ ಸೂಚನೆಗಳನ್ನು ಸದರಿ ಯೋಜನೆಗೆ ಅನುಷ್ಠಾನಗೊಳಿಸತಕ್ಕದ್ದು/ ವೆಚ್ಚಮಾಡುವುದು.
2. ದಿನಾಂಕ: 01.04.2016 ರಿಂದ ಸ್ವೀಕೃತವಾಗಿರುವ ಅರ್ಜಿಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 123 ಎಂಡಿಎಸ್ 2016, ದಿ: 31.03.2016 ರಂತೆ ಜೇಷ್ಠತೆ ಪಟ್ಟಿಯನ್ನು ತಯಾರಿಸಿ ಅರ್ಹ ಅರ್ಜಿಗಳಿಗೆ ಅನುದಾನ ಮಂಜೂರು ಮಾಡುವುದು.
3. ಸ್ವೀಕೃತ ಅರ್ಜಿಗಳನ್ನು ಅಗಿಂದಾಗೆ ಹೊರಡಿಸಲಾಗಿರುವ ಆದೇಶ, ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳ/ಷರತ್ತುಗಳಂತೆ ಕೂಲಂಕುಶವಾಗಿ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಅನುದಾನ ನೀಡತಕ್ಕದ್ದು ಯಾವುದೇ ತಪ್ಪಾಗಿದ್ದಲ್ಲಿ ಮುಂದೆ ಆಗು ಹೋಗುಗಳಿಗೆ ನೇರವಾಗಿ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
4. ಬಿಡುಗಡೆ ಮಾಡಿರುವ ಮೊತ್ತಕ್ಕೆ ಸಂಬಂಧಿಸಿದ ವೆಚ್ಚದ ವಿವರ 62–ಬಿ ಖಜಾನೆಯಿಂದ ಪಡೆದು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ಪ್ರಸ್ತುತ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕಶೀರ್ಷಿಕೆ 2225–03–800–0–07 ಆಬ್ಜೆಕ್ಟ್ ಕೋಡ್ 059 ರಾಜ್ಯವಲಯ ಯೋಜನೆರಡಿ 2018–19 ಭರಿಸುವುದು.

(ಅಕ್ರಂ ಪಾಷ ಐ.ಎ.ಎಸ್)
ನಿರ್ದೇಶಕರು,
ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:–

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ–3, ಬೆಂಗಳೂರು.
4. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
6. ಸಂಬಂಧಪಟ್ಟ ಉಪ–ನಿರ್ದೇಶಕರು/ಜಿಲ್ಲಾ ಖಜಾನಾಧಿಕಾರಿಗಳು
7. ಲೆಕ್ಕ ಪತ್ರ ಶಾಖೆ
8. ಕಛೇರಿ ಪ್ರತಿ
9. ಹೆಚ್ಚುವರಿ ಪ್ರತಿ.

ಅಲ್ಪಸಂಖ್ಯಾತರ ನಿರ್ದೇಶನಾಲಯ

2018-19ನೇ ಸಾಲಿನಲ್ಲಿ ಬಿದಾಯಿ ಯೋಜನೆಯಡಿ 3ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | 3ನೇ ಕಂತಿನ ಅನುದಾನ |
|---|---|---|
| 1 | ಬೆಂಗಳೂರು ನಗರ | 34.50 |
| 2 | ಬೆಂಗಳೂರು(ಗ್ರಾ) | 14.00 |
| 3 | ಬಾಗಲಕೋಟೆ | 31.00 |
| 4 | ಬೆಳಗಾಂ | 76.00 |
| 5 | ಬಳ್ಳಾರಿ | 86.00 |
| 6 | ಬೀದರ್ | 100.00 |
| 7 | ಚಾಮರಾಜನಗರ | 12.00 |
| 8 | ಚಿಕ್ಕಮಗಳೂರು | 20.00 |
| 9 | ಚಿತ್ರದುರ್ಗ | 23.00 |
| 10 | ಚಿಕ್ಕಬಳ್ಳಾಪುರ | 24.00 |
| 11 | ದಕ್ಷಿಣ ಕನ್ನಡ | 70.00 |
| 12 | ದಾವಣಗೆರೆ | 65.00 |
| 13 | ಧಾರವಾಡ | 100.00 |
| 14 | ಗದಗ | 34.00 |
| 15 | ಕಲಬುರಗಿ | 100.00 |
| 16 | ಹಾಸನ | 25.00 |
| 17 | ಹಾವೇರಿ | 96.00 |
| 18 | ಕೊಡಗು | 18.00 |
| 19 | ಕೋಲಾರ | 23.00 |
| 20 | ಕೊಪ್ಪಳ | 33.00 |
| 21 | ಮಂಡ್ಯ | 14.50 |
| 22 | ಮೈಸೂರು | 45.00 |
| 23 | ರಾಯಚೂರು | 46.00 |
| 24 | ರಾಮನಗರ | 27.00 |
| 25 | ಶಿವಮೊಗ್ಗ | 50.00 |
| 26 | ತುಮಕೂರು | 57.50 |
| 27 | ಉತ್ತರ ಕನ್ನಡ | 38.00 |
| 28 | ಉಡುಪಿ | 12.50 |
| 29 | ವಿಜಯಾಪುರ | 60.00 |
| 30 | ಯಾದಗಿರಿ | 40.00 |
| | ಒಟ್ಟು | 1375.00 |

(ರೂ ಹದಿಮೂರು ಕೋಟಿ ಎಪ್ಪತ್ತ ಐದು ಲಕ್ಷಗಳು ಮಾತ್ರ)

(ಅಕ್ರಂ ಪಾಷ)
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು